ದಿನಾಂಕಃ 11.10.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು

ಪಾಟೀ ಸವಾಲುಃ 1 ನೇ ಎದುರುದಾರರ ಪರ ಶ್ರೀಮತಿ.ಎಂ.ಎನ್.ಸಿ ವಕೀಲರಿಂದಃ

ಅಪಘಾತದ ದಿನ ನಾನು ನರಸಾಪುರದಿಂದ ವೇಮುಗಲ್ ನರಸಾಪುರ ರಸ್ತೆಗೆ ಹೋಗುತ್ತಿದ್ದೆ. ಅಪಘಾತ ಸಮಯದಲ್ಲಿ ಲಾರಿ ನಮ್ಮ ಮುಂಭಾಗದಲ್ಲಿ ಹೋಗುತ್ತಿತ್ತು. ನಮ್ಮ ದ್ವಿಚಕ್ರ ವಾಹನದ ಮೇಲೆ ನಾನೊಬ್ಬನೇ ಹೋಗುತ್ತಿದ್ದೆ. ಅಪಘಾತ ಸ್ಥಳದಲ್ಲಿ ರಸ್ತೆಯ ಮೇಲೆ ಹಳ್ಳವಿತ್ತು ಎಂದರೆ ಸರಿಯಲ್ಲ. ನಿ.ಪಿ.3 ಸ್ಥಳ ಮಹಜರ್ ನಲ್ಲಿ ಅಪಘಾತದ ಸ್ಥಳದಲ್ಲಿ ಹಳ್ಳವಿತ್ತು ಎಂದು ನಮೂದಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅಪಘಾತ ಸಮಯದಲ್ಲಿ ನನ್ನ ಮತ್ತು ಮುಂಬದಿಯಲ್ಲಿ ಹೋಗುತ್ತಿರುವ ಲಾರಿಗೆ 20-25 ಅಡಿ ಅಂತರ ಇತ್ತು. ನಮ್ಮಿಬ್ಬರ ನಡುವೆ 20-25 ಅಡಿ ಅಂತರವಿದ್ದ ಕಾರಣ ಮುಂಭಾಗದಲ್ಲಿ ಹೋಗುವ ಲಾರಿ ಒಮ್ಮೆಲೇ ಬ್ರೇಕ್ ಹಾಕಿದ್ದರೆ ನಾನು ಬಲ ಅಥವಾ ಎಡಕ್ಕೆ ತೆಗೆದುಕೊಂಡಿದ್ದರೆ ಅಪಘಾತವಾಗುತ್ತಿರಲಿಲ್ಲ ಎಂದರೆ ಸರಿಯಲ್ಲ ಆದರೆ ಲಾರಿ ಒಮ್ಮೆಲೇ ಮಧ್ಯಭಾಗದಲ್ಲಿ ಬ್ರೇಕ್ ಹಾಕಿ ನಿಲ್ಲಿಸಿದ್ದರಿಂದ ಅಪಘಾತವಾಗಿದೆ ಎಂದು ಸಾಕ್ಷಿ ನುಡಿಯುತ್ತಾರೆ. ಅಪಘಾತ ಸಮಯದಲ್ಲಿ ನಾನು ಸಾಕಷ್ಟು ಅಂತರ ( Safe distance) ಇಡಲಿಲ್ಲವಾದ ಕಾರಣ ಅಪಘಾತ ನನ್ನ ತಪ್ಪಿ ನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ರಸ್ತೆ ಮೇಲೆ ಹಳ್ಳವಿದ್ದು ಹಾಗೂ ನಾನು ಸಾಕಷ್ಟು ಅಂತರ ಕಾಪಾಡದೇ ಇದ್ದ ಕಾರಣ ಮುಂಭಾಗದಲ್ಲಿ ಲಾರಿ ಬ್ರೇಕ್ ಹಾಕಿದಾಗ ನಾನೇ ಹಳ್ಳಕ್ಕೆ ಹೋಗಿ ಬಿದ್ದು ನನ್ನ ತಪ್ಪಿ ನಿಂದ ಅಪಘಾತ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತ ನನ್ನ ತಪ್ಪಿ ನಿಂದ ಆದರೂ ಕೊಡ ಲಾರಿ ತಪ್ಪಿ ನಿಂದ ಆಗಿದೆ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅಪಘಾತದಲ್ಲಿ ನನಗೆ ಕೇವಲ ಸಾದಾ ಸ್ವರೂಪದ ಗಾಯಗಳಾಗಿರುತ್ತವೆ ಎಂದು ದೋಷಾರೋಪಣಾ ಪಟ್ಟಿಯಲ್ಲಿ ನಮೂದಾಗಿದೆ ನನ್ನ ಅರ್ಜಿ ಮತ್ತು ಪ್ರಮಾಣ ಪತ್ರದಲ್ಲಿ ತೀವ್ರ ಪ್ರಮಾಣದ ಗಾಯಗಳಾಗಿರುತ್ತವೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. ಅಪಘಾತವಾದ ನಂತರ ನಾನು ಚಿಕಿತ್ಸೆ ಪಡೆದಿದ್ದಕ್ಕಾಗಿ 4 ಲಕ್ಷ ಖರ್ಚು ಆಗಿದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಚಾಮುಂಡಿ ಡಿಸ್ಟಿಲರಿ ಹೊಸಕೋಟೆಯಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದು ಮತ್ತು ಪ್ರತೀ ತಿಂಗಳ 30 ಸಾವಿರ ಆದಾಯ ಹೊಂದಿದ್ದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಎಂದರೆ ನಿಜ ಆದರೆ ಚಾಲನಾ ಪತ್ರ ಹಾಜರುಪಡಿಸಿರುತ್ತೇನೆ. ನನಗೆ ಕೇವಲ ಸಾದಾ ಸ್ವರೂಪದ ಗಾಯಗಳಾಗಿದ್ದು ಮತ್ತು ಯಾವುದೇ ಅಂಗ ನ್ಯೂನತೆ ಇರುವುದಿಲ್ಲ ಆ ಕಾರಣದಿಂದ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರಾಗಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತ ನನ್ನ ತಪ್ಪಿನಿಂದ ಆ ಕಾರಣ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರಾಗಿರುವುದಿಲ್ಲ ಎಂರದೆ ಸರಿಯಲ್ಲ.

2 ನೇ ಎದುರುದಾರರು ಹಾಗೂ ಅವರ ಪರ ವಕೀಲರು ಗೈರು ಹಾಜರುಕಾರಣ ಪಾಟೀ ಸವಾಲುಃ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ

17 ನೇ ಅಪರ ನ್ಯಾಯಾಧೀಶರು
ಮತ್ತು ಎಂಎಸಿಟಿ ಸದಸ್ಯರು